# 10

# ಪ್ರಸ್ತುತ ಯೇಸುವನ್ನು ಅರಿಯಬಹುದೇ?

ಒಂದು ಸಂದರ್ಶನದ ಸಮಯದಲ್ಲಿ ಒಬ್ಬನಿಗೆ ಇತಿಹಾಸದ ಯಾವ ವ್ಯಕ್ತಿಯನ್ನು ನೀನು ಸಂಧಿಸಲು ಇಷ್ಟಪಡುವಿ? ಎಂಬ ಪ್ರಶ್ನೆಯನ್ನು ಸಂದರ್ಶಕನು ಕೇಳಲಾಗಿ, ಆತನು "ನಜರೇತಿನ ಯೇಸು" ಎಂಬ ಸಹಜ ಪ್ರತಿಕ್ರಿಯೆಯನ್ನು ಆತನು ನೀಡಿದನು. ಬೈಬಲ್ ಹಾಗೂ ಇತಿಹಾಸದ ಪುಸ್ತಕಗಳಲ್ಲ ಯೇಸುವಿನ ಕುರಿತು ಮಹತ್ವದ ಸಂಗತಿಗಳನ್ನು ತಿಳಿಸಿರುವದರಿಂದ, ನಮ್ಮಲ್ಲಿ ಅನೇಕರು ಯೇಸುವನ್ನು ಸಂದಿಸಲು ಇಷ್ಟಪಡುತ್ತೇವೆ.

ಒಬ್ಬ ವ್ಯಕ್ತಿಯನ್ನು ನೇರವಾಗಿ *ಅರಿಯುವದಕ್ಕೂ*, ಆತನ ಕುರಿತಾಗಿ ಬೇರೆಯವರಿಂದ *ಅರಿಯುವದಕ್ಕೂ* ವ್ಯತ್ಯಾಸವಿದೆ. ಇತಿಹಾಸದ ಅಧ್ಯಯನದಿಂದ ಗತಿಸಿಹೋದವರ ವಿಚಾರವನ್ನು ಅರಿಯಬಹುದು, ಅಂದರೆ ಆತನನ್ನೇ ಅರಿತ್ತಿದ್ದೇವೆ ಎಂಬ ಅರ್ಥವಲ್ಲ. ಯೇಸುವಿನ ಕುರಿತಾಗಿ ಏನನ್ನು ಅರಿಯಬಹುದು ಎಂಬ ಅಧ್ಯಯನ ಇದಾಗಿದೆ. ಇತಿಹಾಸದಲ್ಲಿನ ಇತರರಂತೆ, ಯೇಸುವಿನ ಕುರಿತಾದ ಪ್ರಶ್ನೆಯನ್ನು ನಾವು ಕೇಳಿದ್ದೇವೆ: ಆತನ ಕುರಿತಾದ ಯಾವ ಮಾಹಿತಿ ಇದೆ; ಎಲ್ಲಿ ಹೇಗೆ ಯಾವಾಗ ಆತನು ಜೀವಿಸಿದ್ದನು; ಆತನು ಯಾವ ಭಾಷೆಗಳನ್ನು ಮಾತನಾಡುತ್ತಿದ್ದನು; ತನ್ನ ಬಗ್ಗೆ ಏನೆಂದು ಯೋಚಿಸಿದನು; ಆತನು ಏನನ್ನು ನಂಬಿದನು; ಹಾಗೂ ಹೇಗೆ ಸತ್ತನು. ಆತನ ವಿಷಯವಾಗಿ ಯೋಚಿಸುವಾಗ, ಆತನ ಪುನರುತ್ಥಾನವು ಸತ್ಯವೇ ಎಂದು ಸಹ ಗ್ರಹಿಸಬಹುದು.

ಹೊಸ ಒಡಂಬಡಿಕೆಯ ಬರಹಗಾರರ ಪ್ರಶ್ನೆಗಳನ್ನು: ಪ್ರಸ್ತುತವಾಗಿ ಯೇಸುವನ್ನು ನಾವುಗಳು ಅರಿಯಬಹುದೇ? ಇದು ಇತಿಹಾಸದ ಪ್ರಶ್ನೆಯಲ್ಲದಿದ್ದರೂ, ಯೇಸುವಿನ ಚರಿತ್ರೆ ಇದನ್ನು ಹೇಳುತ್ತದೆ: ಯೇಸು ಮರಣದಿಂದ ಎದ್ದು ಬಂದು ಪರಲೋಕದಲ್ಲಿ ಜೀವಿಸುತ್ತಿದ್ದಾನೆ. ಅದಕ್ಕೆ ಅನುಗುಣವಾದ ಯಾವದಾದರು ಸತ್ಯವಿದ್ದರೆ, ನಾವು ನಿಜವಾಗಿ ಆತನನ್ನು ಅರಿಯಬಹುದು. ಅದು ಕೇವಲ ಆತನ ಕುರಿತು ಅರಿತುಕೊಳ್ಳುವದಲ್ಲ. ಇದು ಕೇವಲ ಇತಿಹಾಸದ ಅಧ್ಯಯನವಾಗಿರದೇ, ದೈವಶಾಸ್ತ್ರ ಅಧ್ಯಯನವಾಗಿದೆ, ಹಾಗೂ ವ್ಯಕ್ತಿಗತ ನಂಬಿಕೆಯಾಗಿದೆ. ಯೇಸುವಿನ ಸಂಗತಿಯು ದೃಢವಾಗಿದ್ದರೆ, ಈ ಪ್ರಶ್ನೆಯನ್ನು ನಾವು ಕೇಳ ಬೇಕು. ಇತರರ ಮೂಲಕ ಅರಿಯುವದು ಒಂದು ಮೂಲವಾಗಿದೆ. ಇತಿಹಾಸದ ಪ್ರಶ್ನೆಗಳು ಮಾತ್ರ ಒಳಗೊಂಡಿರುವದಿಲ್ಲ.

ಕ್ರೂಜಿತನಾಗುವ ಮೊದಲು, ಯೇಸು ತನ್ನ ತಂದೆಯಲ್ಲಿ ಮಾತನಾಡಿದನು ಎಂದು ಯೋಹಾನನ ಸುವಾರ್ತೆ ತಿಳಿಸುತ್ತದೆ,

> ತಂದೆಯೇ, ಕಾಲ ಬಂದದೆ; ನಿನ್ನ ಮಗನನ್ನು ಮಹಿಮೆಪಡಿಸು, ಆಗ ಮಗನು ನಿನ್ನನ್ನು ಮಹಿಮೆಪಡಿಸುವದಕ್ಕಾಗುವದು. ನೀನು ಅವನಿಗೆ ಯಾರಾರನ್ನು ಕೊಟ್ಟಿದ್ದೀಯೋ ಅವರೆಲ್ಲರಿಗೆ ಅವನು ನಿತ್ಯಜವವನ್ನು ಕೊಡಬೇಕೆಂದು ಅವನಿಗೆ ಎಲ್ಲಾ ಮನುಷ್ಯರ ಮೇಲೆ ಅಧಿಕಾರವನ್ನು ಕೊಟ್ಟಿಯಲ್ಲಾ. ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯ ಜೀವವು (ಯೋಹಾನ 17:1ಬಿ-3).

ಯೇಸುವಿನ ಮಾತಿನ ಪ್ರಕಾರ, ಆತನನ್ನು ಅರಿತು, ದೇವರನ್ನು ಅರಿಯುವ ಸಾಧ್ಯತೆಯು ಇರುತ್ತದೆ: "ನಿತ್ಯಜೀವವೆಂದರೆ" ಆತನ ಮಗನಾದ ಯೇಸುವಿನ ಮೂಲಕ ದೇವರನ್ನು ನೋಡುವದು (ಯೋಹಾನ 1:14-18). ಆತನ ಕಾಲದಲ್ಲಿದ್ದವರು ಮಾತ್ರವಲ್ಲದೆ, ನಂತರದಲ್ಲಿ

ಆತನ ಶಿಷ್ಯರ ಮಾತುಗಳನ್ನು ನಂಬುವವರಿಗಾಗಿಯೂ ಆತನು ಪ್ರಾರ್ಥಿಸಿರುವನು (ನೋಡಿರಿ 17:20).

## ಆತನು ಈಗಲೂ ನಮ್ಮೊಂದಿಗಿದ್ದಾನೆ

ಈ ದಿನವೂ ಸಹ ಯೇಸುವನ್ನು ಅರಿಯಬಹುದೆಂದು ಹೊಸ ಒಡಂಬಡಿಕೆಯ ಬರಹಗಾರನಾದ ಯೋಹಾನನು ಮಾತ್ರ ತಿಳಿಸದೆ, ಲೂಕನು ಥಿಯೋಫಿಲನಿಗೆ ಬರೆದು, "ನಿನಗೆ ಉಪದೇಶಿಸಿರುವ ವಿಷಯಗಳು ಯಥಾರ್ಥವಾದವುಗಳೆಂದು ಇದರಿಂದ ನೀನು ಗೊತ್ತು ಮಾಡಿಕೊಳ್ಳಬಹುದು" (ಲೂಕ 1:3, 4). ಲೂಕನು ಈ ಆಲೋಚನೆಯನ್ನು ಅಪೊಸ್ತಲರ ಕೃತ್ಯಗಳಲ್ಲಿ ಮುಂದುವರೆಸಿ: "ಥೆಯೊಫಿಲನೇ, ನಾನು ಮೊದಲು ಬರೆದ ಚರಿತ್ರೆಯಲ್ಲಿ ಯೇಸು ಮಾಡುವದಕ್ಕೂ ಉಪದೇಶಿಸುವದಕ್ಕೂ ಪ್ರಾರಂಭಿಸಿದ್ದೆಲ್ಲವನ್ನು ಹೇಳಿ ತಾನು ಆರಿಸಿಕೊಂಡಿದ್ದ ಅಪೊಸ್ತಲರಿಗೆ ಪವಿತ್ರಾತ್ಮನ ಮೂಲಕ ಆಜ್ಞೆಕೊಟ್ಟು ಮೇಲಣಲೋಕವನ್ನೇರಿದ ದಿನದವರೆಗೆ ವಿವರಿಸಿದೆನಷ್ಟೆ" (ಅಪೊಸ್ತಲರ ಕೃತ್ಯಗಳು 1:1, 2). ಲೂಕನು ತನ್ನ ಮೊದಲ ಪುಸ್ತಕದಲ್ಲಿ (ಲೂಕನ ಸುವಾರ್ತೆ) ಯೇಸುವಿನ "ಬೋಧನೆ ಹಾಗೂ *ಕ್ರಿಯೆಯ* ಬಗ್ಗೆ" ಬರೆದನು (ಒತ್ತಿ ಹೇಳಿದ್ದು ನನ್ನದು). ಯೇಸು ಇನ್ನು ಅಂತ್ಯವಾಗದೆ ಇದ್ದದ್ದರಿಂದ, ಲೂಕನು ಯೇಸುವಿನ ಚರಿತ್ರೆಯನ್ನು ಮೊಟಕುಮಾಡಲಿಲ್ಲ. ಪವಿತ್ರಾತ್ಮನ ಭಲದಿಂದ, ಯೇಸು ತನ್ನ ಕಾರ್ಯವನ್ನು ಮುಂದುವರೆಸಿದನು ಎಂದು ಅಪೊಸ್ತಲರ ಕೃತ್ಯಗಳಲ್ಲಿ ತಿಳಿಸುತ್ತದೆ - ಆತನು ಪರಲೋಕಕ್ಕೆ ಏರಿ ಹೋದ ನಂತರ ಆತ್ಮೀಕವಾಗಿ ಅವರೊಂದಿಗಿದ್ದು ಕಾರ್ಯ ನಿರ್ವಹಿಸಿದನು (ಅಪೊಸ್ತಲರ ಕೃತ್ಯಗಳು 1:6-11). ಲೂಕನ ಪ್ರಕಾರವಾಗಿ, ಆತನ ಪುನರುತ್ಥಾನದ ನಂತರ, ಪವಿತ್ರಾತ್ಮನ ಬರೋಣದ ಕುರಿತು ಯೇಸು ತನ್ನ ಶಿಷ್ಯರಿಗೆ ತಿಳಿಸಿದನು. ವಾಗ್ದಾನದ ಆತ್ಮನು ಬೇಗನೆ ಬರುವನು ಅಂದನು (ಅಪೊಸ್ತಲರ ಕೃತ್ಯಗಳು 1:4, 5). ಅಪೊಸ್ತಲರ ಕೃತ್ಯಗಳಲ್ಲಿ, ಪವಿತ್ರಾತ್ಮನ ಮೂಲಕ ಯೇಸು ಮಾಡಿದ ಕಾರ್ಯಗಳನ್ನು ಗಮನಿಸುತ್ತೇವೆ.

ಈ ಕಾರಣದಿಂದ, ಪ್ರಸ್ತುತ ವಿಚಾರಗಳನ್ನು ಅಪೊಸ್ತಲರ ಕೃತ್ಯಗಳಿಂದ ಅರಿಯಬಹುದಾಗಿದೆ: ಯೇಸುವನ್ನು ಪ್ರಸ್ತುತವಾಗಿ ಅರಿಯಬಹುದೇ?

## "ಆತನ ಕುರಿತಾಗಿ ಅರಿತ ನಂತರ" ಆತನನ್ನೇ ಅರಿಯುವದು

ಅಪೊಸ್ತಲರ ಕೃತ್ಯಗಳು 1ರಲ್ಲಿ, ಆತನು, ಪವಿತ್ರಾತ್ಮನು ಬರುವನು ಎಂದು ಹೇಳಿದ ಸಂಗತಿಯು ಅಧ್ಯಾಯ ಎರಡರಲ್ಲಿ ನೆರವೇರಿದೆ. ಅಂದು ಯೆಹೂದ್ಯರ ಪಂಚಾಶತ್ತಮ ಹಬ್ಬದ ದಿನವಾಗಿತ್ತು (ಪಸ್ಕದ ಐವತ್ತು ದಿನಗಳ ನಂತರ ಪಸ್ಕದ ದಿನದಂದು ಯೇಸು ಕ್ರೂಜಿತನಾಗಿದ್ದನು, ಐವತ್ತು ದಿನಗಳ ನಂತರ ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ಪ್ರವಾಸಿಗಳು ಕಿಕ್ಕಿರಿದು ಸೇರಿದ್ದರು). ಯೇಸು ಶಿಷ್ಯರಿಗೆ ತಿಳಿಸಿದಂತೆ ಅವರು ಸಹ ಅಲ್ಲಿ ಸೇರಿ ಬಂದಿರುವಾಗ, ಪವಿತ್ರಾತ್ಮನಿಂದ ಮೂರು ಸಂಗತಿಗಳು ಜರುಗಿದವು. ಮೊದಲನೆಯದಾಗಿ ಬಿರುಗಾಳಿಯ ಶಬ್ದ ಉಂಟಾಯಿತು, ನಂತರ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿತು. (ನೋಡಿರಿ 2:8, 11 ಆಗ ಅವರು "ಬೇರೆ ಬೇರೆ ಭಾಷೆಗಳಿಂದ ಮಾತನಾಡಲು ಆಂಭಿಸಿದರು.")

ಈ ಸಂಗತಿಗಳು, ಇತರೆ ಜನರನ್ನು ಆಕರ್ಷಿಸಿದವು. ಪಂಚಾಶತ್ತಮ ಸಂಗತಿಗಳಿಗಿಂತಲೂ, ಈ ಸಂಗತಿಯನ್ನು ಅರಿಯಲು ಜನರು ಅಪೇಕ್ಷೇಗೊಂಡರು. ಇಲ್ಲಿ ವಿಶೇಷ ಸಂಗತಿಯನ್ನು ಪೇತ್ರನು ತಿಳಿಸುತ್ತಿದ್ದನು. ಇಲ್ಲಿ ನಡೆಯುತ್ತಿದ್ದ ಘಟನೆಯ ಕುರಿತು ಅನೇಕ ಶತಮಾನಗಳ ಮೊದಲೇ ಯೋವೇಲನು ಪ್ರವಾದಿಸಿದ್ದನು, ಅದು ದೇವರು ತನ್ನ ಆತ್ಮನನ್ನು ಸಕಲರ ಮೇಲೆ ಸುರಿಸುವನೆಂಬ ವಾಗ್ದಾನವಾಗಿತ್ತು. ಅದು ಕೇವಲ ಪ್ರವಾದಿಗಳಿಗೆ, ಅರಸನಿಗೆ, ಅಥವಾ ಇಸ್ರಾಯೇಲ್ ಜನರ ನಾಯಕರಿಗೆ ಮಾತ್ರ ಸೀಮಿತವಾಗಿರಲಿಲ್ಲ (2:14-21). ಈ ಆತ್ಮನು

ಅಂದರೆ, ಕ್ರಿಸ್ತನ ಸನ್ನಿಧಿ ಎಲ್ಲರಿಗೂ ಲಭ್ಯವಾಯಿತು. ನಂತರ ಪೇತ್ರನು ಮುಂದುವರೆದು, ಕ್ರೂಜೆಯ ಮಹತ್ವವನ್ನು ತಿಳಿಸಿ, ಆತನ ಚರಿತ್ರೆಯು ಮರಣದಲ್ಲಿ ಅಂತ್ಯವಾಗಲಿಲ್ಲ ಅಂದನು. ಕೀರ್ತನೆ ಗ್ರಂಥವನ್ನು 16:8-11; 110:1 (2:22-35). ನೆನಪು ಮಾಡಿ, ದೇವರು ಯೇಸುವನ್ನು ಮರಣದಿಂದ ಎಬ್ಬಿಸಿದನು ಎಂದು ಪ್ರಸಂಗಿಸಿದನು: "ಆದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದಾನೆಂಬುದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು" (ವಚನ 36).

ಪೇತ್ರನ ಸಂದೇಶದಲ್ಲಿ, ಯೆಹೂದ್ಯರು ಯೇಸುವಿನ ಮರಣಕ್ಕೆ ಕಾರಣರಾದವರು ಎಂಬ ಸೂಚನೆಯಿದ್ದರೂ, ಅವರ ಹೃದಯಗಳಲ್ಲಿ ಅಲಗು ನೆಟ್ಟಂತಾಯಿತು. ಅವರ ಆಲೋಚನೆಯಂತೆ ಯೇಸು, ಮೆಸ್ಸೀಯನೆಂದು ನಟನೆ ಮಾಡದೆ, ಆತನು ಕರ್ತನು ಹಾಗೂ ಮೆಸ್ಸೀಯನೇ ಆಗಿದ್ದನು ಎಂದು ಅವರಿಗೆ ತಿಳಿದುಬಂತು. ಆದ್ದರಿಂದಲೇ ಅವರು, "ಈಗ ನಾವು ಏನು ಮಾಡೋಣ?" ಅಂದರು (ವಚನ 37). ಪೇತ್ರನು ಸಂದೇಹವಿಲ್ಲದ ಉತ್ತರವನ್ನು ನೀಡಿ, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ಅಂದನು" (ವಚನ 38). ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಂಡವರು ಪವಿತ್ರಾತ್ಮ ದಾನವನ್ನು ಹೊಂದುವರು. ಅಂದರೆ ಯೇಸುವಿನ ಸನ್ನಿಧಾನವು ಅವರಲ್ಲಿ ಮುಂದುವರೆಯುವದು ಎಂಬದೇ. ಅವರು ಕ್ರೂಜೆಗೆ ಹಾಕಲ್ಪಟ್ಟ ಯೇಸು ಎದ್ದು ಬಂದಿರುವದು ಮಾತ್ರವಲ್ಲದೆ, ಆತನ ಉಪದೇಶಗಳನ್ನು ಪಾಲಿಸುವವರ ಸಂಗಡ ಯಾವಾಗಲೂ ಮುಂದುವರೆಯುವನು ಎಂಬದೇ. ಅವರ ಪ್ರಶ್ನೆಗೆ, ಪೇತ್ರನು ಐತಿಹಾಸಿಕ ಯೇಸುವಿನ ಉತ್ತರವನ್ನೇ ನೀಡಿದನು ಎಂಬುದನ್ನು ಗಮನಿಸಿ; ಆತನನ್ನು ಅವರು ನಂಬಿ, ಆತನಿಗೆ ವಿಧೇಯರಾಗಬೇಕಿತ್ತು. ಅವರು ಆತನನ್ನು "ಅರಿಯಬೇಕಾದ" ವಿಧವೇನೆಂದರೆ: ಪವಿತ್ರಾತ್ಮನ ಮೂಲಕ ಆತನು ಅವರೊಂದಿಗೆ ನೆಲಸುವನು. ಅನ್ಯರಾದವರು ಯೇಸುವನ್ನು ನಂಬಿದಾಗ, ದೇವರ ಸನ್ನಿಧಿಯ ಮೂಲಕವಾಗಿ, ಅವರು ಸಹ ದೇವರಿಂದ ಅಂಗೀಕರಿಸಲ್ಪಟ್ಟರು ಎಂದು ಮತ್ತೊಮ್ಮೆ ದೃಢಪಟ್ಟಿತು. (ಸಮಾರ್ಯರ, ಅರ್ಧ ಯೆಹೂದ್ಯರು 8:14-16; ಅನ್ಯರು ಸಹ ಈ ಸಂದೇಶವನ್ನು ಅಂಗೀಕರಿಸಿದರು 10:44-48; 11:15-18.)

ಯೇಸುವಿನ ಸಂದೇಶವನ್ನು ನೇರವಾಗಿ ಅಂಗೀಕರಿಸಿಕೊಳ್ಳುವ ಮೂಲಕ ಪವಿತ್ರಾತ್ಮನನ್ನು ಸ್ವೀಕರಿಸಿದರು. ಇದನ್ನು ಅಪೊಸ್ತರ ಕೃತ್ಯಗಳು 5:32ರಲ್ಲಿ ದಾಖಲಿಸಿ: ಅವರನ್ನು ಯೆಹೂದ್ಯರ ಮುಂದೆ ತಂದಾಗ, ನಾವು ಕ್ರಿಸ್ತನಿಗೆ ಸಾಕ್ಷಿಗಳು ಎಂದು ಹೇಳಿದರು. "ಮನುಷ್ಯರಿಗಿಂತಲೂ ದೇವರಿಗೆ ಹೆಚ್ಚಾಗಿ ವಿಧೇಯರಾಗಬೇಕಲ್ಲಾ" (ವಚನ 29); ಎಂದು ಹೇಳಿದರು, ದೇವರು ತನಗೆ ವಿಧೇಯರಾಗಿರುವವರಿಗೆ ದಯಪಾಲಿಸಿರುವ ಪವಿತ್ರಾತ್ಮನೂ ಸಾಕ್ಷಿ ಎಂದು ಹೇಳಿದರು. ದೇವರ ತಿಳುವಳಿಕೆಗಾಗಿ ಮಾತ್ರ ಪವಿತ್ರಾತ್ಮನು ಬಾರದೆ ಮತ್ತು ಉದ್ವೇಗದ ಅನುಭವಕ್ಕಾಗಿಯೂ ಬರಲಿಲ್ಲ. ಮಾನಸಾಂತರ ಪಟ್ಟು ಯೇಸುವಿನ ನಾಮದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವಲ್ಲಿ ವಿಧೇಯರಾಗಿ ಅಪೊಸ್ತಲರ ಆ ದೇಶಕ್ಕೆ ಅವರು ಒಳಗಾಗುವದರಿಂದ ಈ ಅನುಭವ ಅವರಿಗೆ ಉಂಟಾಗುತ್ತಿತ್ತು. ಈ ಕೆಳಕಂಡ ಅಪೊಸ್ತಲರ ಹೇಳಿಕೆಯಲ್ಲಿ ಯೇಸು ಈಗಾಗಲೇ ಮಾಡಿದ ಕಾರ್ಯಗಳು ಒಳಗೊಂಡಿದ್ದವು:

> "ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶಮಾಡಿರಿ. ನೋಡಿರಿ, *ನಾನು ಯುಗದ ಸಮಾಪ್ತಿಯವರೆಗೂ* ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು" (ಮತ್ತಾಯ 28:19, 20; ಒತ್ತಿ ಹೇಳಿದ್ದು ನನ್ನದು).

## “ಪೌಲನು ಯೇಸುವನ್ನು ಸಂಧಿಸಿದನು”

ಯೇಸುವಿನ ಕುರಿತಾದ ಬಲವಾದ ಸಾಕ್ಷಿ ಪೌಲನೇ ಎಂದು ಈಗಾಗಲೇ ನಾವು ತಿಳಿಸಿದ್ದೇವೆ. ಅವನು ತನ್ನನ್ನು ಅನ್ಯರಿಗಾಗಿ ಆಯ್ಕೆಯಾದ ಅಪೊಸ್ತಲನು ಎಂದು ಕರೆದು ಕೊಂಡನು (ನೋಡಿರಿ ರೋಮಾಪುರ 11:13; 1 ತಿಮೊಥೆ 2:7). ಯುದಾಯದಿಂದ ದೂರವಾದವರಿಗೆ ಸುವಾರ್ತೆಯನ್ನು ಸಾರಲು, ದೇವರು ಏಕಾಂಗಿಯಾದ ಪೌಲನನ್ನು ಆರಿಸಿಕೊಂಡು (ಅಪ್ಪೊಸ್ತಲರ ಕೃತ್ಯಗಳು 9:15; ಗಲಾತ್ಯ 1:15, 16; 2:9). ಅಪೊಸ್ತಲರ ಕೃತ್ಯದಲ್ಲಿ ಪೌಲನನ್ನು ನಾವು ಮೊದಲನೆಯ ಸಾರಿ ಸಂಧಿಸಿದಾಗ ಅವನು ಅಪೊಸ್ತಲನಾದ ಪೌಲನಾಗಿರದೆ, ಕ್ರೈಸ್ತರ ಭಕ್ತಿಗೆ ಕುಂದು ತರುವ ತಾರ್ಸದ ಸೌಲನಾಗಿದ್ದನು (ಗಲಾತ್ಯ 1:13). ಆಗ ಅವನು ಯೇಸುವನ್ನು ಅರಿತಿರಲಿಲ್ಲ. ಕ್ರೈಸ್ತರನ್ನು ಹಿಂಸಿಸುವ ಉದ್ದೇಶದಿಂದ ಅವನು ದಾರಿಯಲ್ಲಿ ಹೋಗುತ್ತಿರುವಲ್ಲಿ ಯೇಸು ಅವನಿಗೆ ಕಾಣಿಸಿಕೊಂಡಾಗ, ಪೌಲನು ಯೇಸುವಿಗೆ “ನೀನಾರು?” ಎಂದು ಕೇಳಿದನು. ಅದಕ್ಕೆ ಯೇಸು ನೀನು ಹಿಂಸಿಸುತ್ತಿರುವ ಯೇಸುವೇ ನಾನು ಎಂದು ಉತ್ತರ ನೀಡಿದನು (ಅಪೊಸ್ತಲರ ಕೃತ್ಯಗಳು 9:5). ಅವನಿಗಾದ ಸಂಗತಿಗಳ ಕುರಿತು ಮೂರು ದಿನಗಳ ನಂತರ ಅವನು ಅರಿತುಕೊಂಡನು. ಯೇಸು ಕ್ರಿಸ್ತನು ಅವನಿಗೆ ಕಾಣಿಸಿಕೊಂಡನು ಎಂದು ಅನನೀಯನೆಂಬುವನು ಅವನಿಗೆ ತಿಳಿಸಿಕೊಟ್ಟನು. ಅವನು ಪೌಲನ ತಲೆಯ ಮೇಲೆ ಕೈ ಇಟ್ಟಿದ್ದರಿಂದ ಅವನು ಪವಿತ್ರಾತ್ಮನನ್ನು ಹೊಂದಿದನು (ಅಪೊಸ್ತಲರ ಕೃತ್ಯಗಳು 9:17, 18). ನಂತರದಲ್ಲಿ ಪೌಲನು ಪ್ರಸಂಗಿಸುವಾಗ, ಅನನೀಯನು ಮಾಡಿದ ಸಂಗತಿಗಳನ್ನು ವಿವರಿಸಿ (ಅಪೊಸ್ತಲರ ಕೃತ್ಯಗಳು 13:13). “ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ, ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು” (ಅಪೊಸ್ತಲರ ಕೃತ್ಯಗಳು 22:16). ಈ ರೀತಿ ಯಾಗಿ ಪೌಲನು ಯೇಸುವನ್ನು ಅರಿತನು.

ಯೇಸುವನ್ನು ಅರಿಯುವಲ್ಲಿ ಪೌಲನು ಇಷ್ಟಕ್ಕೆ ನಿಲ್ಲಿಸಲಿಲ್ಲ. ಗ್ರೀಕ್ ಪಟ್ಟಣದಲ್ಲಿದ್ದ ಫಿಲಿಪ್ಪಿ ಕ್ರೈಸ್ತರಿಗೆ ಅವನು ಬರೆದು, ಯೇಸುವನ್ನು ಅರಿತ ಅನುಭವವಿದ್ದರೂ, ಆತನನ್ನು ಅಧಿಕವಾಗಿ ಅರಿಯಬೇಕೆಂದು ಇಚ್ಚಿಸಿದನು. ಫಿಲಿಪ್ಪಿಯವರು, ಕೇವಲ, ಯೇಸುವನ್ನು ಹಿಂಬಾಲಿಸುವದು ಸಾಕಾಗದೆ, ಅವರ ಬೋಧನೆಗಳಾದ ಸುನ್ನತಿ ಎಂಬ ಸಂಗತಿಗೂ ಎಚ್ಚರವಾಗಿರಬೇಕೆಂದು ತಿಳಿಸಿದನು (ಆದಿ ಕ್ರೈಸ್ತರಲ್ಲಿ ಇದು ಪ್ರಮುಖವಾದ ಅಂಶವಾಗಿತ್ತು. ಅಪೊಸ್ತಲರ ಕೃತ್ಯಗಳು 15:1-5; ಗಲಾತ್ಯ 5:1-6). ಫಿಲಿಪ್ಪಿ 3:4-6 ತಿಳಿಸಿದ ನಂತರ, ಅವನು ಉತ್ತಮವಾದ ಯೆಹೂದ್ಯನಾದನು ಎಂದು ನೋಡುತ್ತೇವೆ:

> ಆದರೆ ನನಗೆ ಲಾಭವಾಗಿದ್ದಂಥವುಗಳನ್ನು ಕ್ರಿಸ್ತನ ನಿಮಿತ್ತನಷ್ಟವೆಂದೆಣಿಸಿದ್ದೇನೆ. ಇಷ್ಟೇ ಅಲ್ಲದೆ, ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವುದೇ ಅತಿಶ್ರೇಷ್ಠವಾದದ್ದೆಂದು ತಿಳಿದುನಾನು ಎಲ್ಲವನ್ನು ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ. ಇದರಲ್ಲಿ ನನ್ನ ಉದ್ದೇಶವೇನಂದರೆ - ನಾನು ಕ್ರಿಸ್ತನನ್ನು ಸಂಪಾದಿಸಿಕೊಂಡು ನೇಮನಿಷ್ಠೆಗಳ ಫಲ ವಾಗಿರುವ ಸ್ವನೀತಿಯನ್ನಾಶ್ರಯಿಸದೆ ಕ್ರಿಸ್ತನನ್ನು ನಂಬುವದರಿಂದ ದೊರಕುವಂಥ ಅಂದರೆ ಕ್ರಿಸ್ತನನ್ನು ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡುವಂಥ ನೀತಿ ಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳಬೇಕೆಂಬದೇ. ಆತನನ್ನೂ ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ ಆತನ ಬಾಧೆಗಳಲ್ಲಿ ಪಾಲುಗಾರನಾಗಿರುವ ಪದವಿಯನ್ನೂ ತಿಳುಕೊಂಡು ಆತನ ಮರಣದ ವಿಷಯದಲ್ಲಿ ಆತನಿಗೆ ಸ್ವರೂಪನಾಗ ಬೇಕೆಂಬದೇ ನನ್ನ ಕುತೂಹಲವಾಗಿದೆ.
>
> ಹೀಗಾದರೆ ಸತ್ತವರಲ್ಲಿ ಕೆಲವರಿಗೆ ಆಗುವ ಪುನರುತ್ಥಾನವು ನನಗೆ ಒದಗಿಬಂದೀತು. ಇಷ್ಟರೊಳಗೆ ನಾನು ಬಿರುದನ್ನುಪಡಕೊಂಡು ಸಿದ್ಧಿಗೆ ಬಂದವನೆಂದು ಹೇಳುವದಿಲ್ಲ; ನಾನುಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತಯೇಸು ನನ್ನನ್ನು ಹಿಡಿದುಕೊಂಡನೋ

ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ (ಫಿಲಿಪ್ಪಿ 3:7-12).

ಪೌಲನು ಈಗಾಗಲೇ ಕ್ರಿಸ್ತನನ್ನು ಅರಿತಿದ್ದು, ಇನ್ನೂ ಹೆಚ್ಚಾಗಿ ಆತನನ್ನು ಅರಿಯಬೇಕೆಂಬ ನಿರ್ಧಾರ ಮಾಡಿದನು. ಅದು ಅವನಿಗೆ ಪ್ರಸ್ತುತ ಹಾಗೂ ಭವಿಷ್ಯದ ಸಂಗತಿಯಾಗಿತ್ತು. ಅದು ಕೇವಲ ಆತನ ಕುರಿತಾದ ಜ್ಞಾನವಾಗಿರದೆ, ಕ್ರಿಸ್ತನನ್ನೇ ಅರಿಯುವ ಆಶೆವುಳ್ಳ ವನಾಗಿದ್ದನು (1 ಕೊರಿಂಥ 9:1). ಆ ಜ್ಞಾನದ ನಿಮಿತ್ತ ಅವನು ಯೇಸುವಿನ ಹಾಗೆ ಆಗುವ ಅಪರಿಮಿತ ಜ್ಞಾನ ಪಡೆದನು. ಮುಖ್ಯವಾಗಿ ಯೇಸುವಿನ ಸುವಾರ್ತೆಯನ್ನು ಸಾರುವಲ್ಲಿ ಹಿಂಸೆಯನ್ನು ಹೊಂದಿದನು. ಅದು ಬಹಳ ಬೆಲೆಯುಳ್ಳ ಸಂಗತಿಯಾಗಿತ್ತು (ನೋಡಿರಿ ಫಿಲಿಪ್ಪಿ 1:12-30).

## ಮುಂದುವರೆದ ಸಂಬಂಧ

ಪೌಲನು ಯೇಸುವನ್ನು ಸಂಧಿಸಿದ ಸಂಗತಿ, ಅದು ಕೊನೆಯ ಸಂಗತಿಯಾಗಲಿಲ್ಲ. ಒಂದು ಘಟನೆ ನಡೆದ ನಂತರ, ನಾವು ಅದನ್ನು ಬಿಟ್ಟು ಬಿಡಬಾರದು. ಅದನ್ನು ನಾವು ಮನನ ಮಾಡಬಹುದೇ? ಯೇಸುವನ್ನು ಅರಿಯುವ ಸಂಗತಿಯು ಜೀವಿತವನ್ನೇ ಬದಲಾಯಿಸುತ್ತದೆ.

ಮೊದಲ ಶತಮಾನದ ಅಂತ್ಯದಲ್ಲಿ ಯೋಹಾನನು, ಅಪಾಯದಲ್ಲಿದ್ದ ಒಂದು ಕ್ರೈಸ್ತ ಸಮೂಹಕ್ಕೆ ಬರೆದನು. ಕ್ರಿ.ಶ.ದಲ್ಲಿ ಯೇಸು ಮತ್ತು ಕ್ರಿಸ್ತನು ಒಂದೇ ಎಂಬ ತತ್ವವನ್ನು ಅರಿಯದೇ ಇದ್ದವರ ಸಂಗಡ ಆ ಜನರು ಹೋರಾಡುತ್ತಿದ್ದರು. ಇಂಥವರು ಯೇಸುವಿನಿಂದಾದ ಉಪದೇಶ ವನ್ನು ತೊರೆದು, ಅನೈತಿಕ ಜೀವಿತಕ್ಕೆ ಇಳಿದು ಹೋಗಿದ್ದರು. ಆದ್ದರಿಂದ ಅವರು ಯೇಸುವನ್ನು ಅರಿಯಲಿಲ್ಲ ಎಂದು ಯೋಹಾನನು ಬರೆದನು.

> ನಾವು ಆತನಿಂದ ಕೇಳಿ ನಿಮಗೆ ತಿಳಿಸುವ ವಾರ್ತೆಯಾವದಂದರೆ ದೇವರು ಬೆಳಕಾಗಿದ್ದಾನೆ; ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ ಎಂಬದೇ. ನಾವು ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾ ಡುವರಾಗಿದ್ದೇವೆ, ಸತ್ಯವನ್ನನುಸರಿಸುವವರಲ್ಲ. ಆದರೆ ಆತನು ಬೆಳಕಿನಲ್ಲಿರವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತಯಲ್ಲಿ ದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿಮಾಡುತ್ತೆ. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬುದು ನಮ್ಮಲಿಲ್ಲ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು. ನಾವು ಪಾಪಮಾಡಲಿಲ್ಲವೆಂದು ಹೇಳಿದರೆ ಆತನನ್ನು ಸುಳ್ಳುಗಾರನ್ನಾಗಿ ಮಾಡುತ್ತೇವೆ, ಮತ್ತು ಆತನ ವಾಕ್ಯವು ನಮ್ಮಲ್ಲಿ ಇಲ್ಲ.
>
> ... ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬದು ಅವನಲ್ಲಿ ಇಲ್ಲ (1 ಯೋಹಾನ 1:5-2:4).

ಯೋಹಾನ ಪ್ರಕಾರ, "ಯೇಸು ನಡೆದ ಹಾದಿಯಲ್ಲಿ ನಡೆಯುವದೇ" ಆತನನ್ನು ಅರಿಯುವ ಸಂಗತಿಯಾಗಿತ್ತು (ಆತನು ಜೀವಿಸಿದ ಹಾಗೆ ಜೀವಿಸಿರಿ, 1 ಯೋಹಾನ 2:6). ಆತನನ್ನು "ಅರಿಯುವದು ಎಂದರೆ," ಯಾವದೋ ಒಂದ ಅಜ್ಞಾತ ಶಕ್ತಿಯನ್ನು ಅವಲಂಭಿಸುವದು ಎಂದಿರದೆ, ಆತನು ನಡೆಸುವ ಪ್ರಕಾರ, ಆತನ ಸನ್ನಿಧಿಯಲ್ಲಿ ಜೀವಿಸುವದು. ಹೊಸ ಒಡಂಬಡಿಕೆಯ ಯೋಹಾನನ, ಪೌಲನ ಸುವಾರ್ತೆಗಳಲ್ಲಿ ಈ ಮಾರ್ಗದರ್ಶನವನ್ನು ನೀಡಲಾಗಿದೆ - ಈ ದಾಖಲೆಗಳಲ್ಲಿ ಯೇಸುವಿನ ಕುರಿತಾಗಿ ಬರೆಯಲಾಗಿದೆ.

# ಅಂತ್ಯಗೊಳ್ಳದ ಜ್ಞಾನ

ಇಹಲೋಕದ ಅನುಭವದಲ್ಲಿಯೇ, ಯೇಸುವಿನ ಮತ್ತು ನಮ್ಮ ಸಂಬಂಧ ಅಂತ್ಯಗೊಳ್ಳುವದಿಲ್ಲವೆಂದು ಯೇಸು ವಾಗ್ದಾನ ಮಾಡಿರುವನು. ನಾವು ಆತನನ್ನು ಅರಿತರೆ, ಆತನಿಗೆ ಸಂಬಂಧ ಪಟ್ಟವರು ಎಂದಿರುವನು. ಆತನು ಹಿಂದಿರುಗಿ ನಮ್ಮನ್ನು ಅತನಿರುವ ಪರಲೋಕಕ್ಕೆ ಸೇರಿಸುವನು. ಆತನು ಹೊರಟು ಹೋಗುವ ವಿಚಾರದಲ್ಲಿ ಬೇಸರಗೊಂಡ ತನ್ನ ಶಿಷ್ಯರಿಗೆ ಆತನು,

> ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು; ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಯಾಕಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು (ಯೋಹಾನ 14:1-3).

ಯೇಸುವು ಹೋಗುವ ದಾರಿಯನ್ನು ಅರಿಯಬೇಕೆಂದು ಬಯಸಿದ ತೋಮನಿಗೆ ಆತನು, "ನಾನೇ ಮಾರ್ಗವು, ಸತ್ಯವೂ, ಜೀವವೂ ಆಗಿದ್ದೇನೆ" ಎಂದು ಉತ್ತರಿಸಿದನು (14:6). ಗೊಂದಲಮಯವಾದ ಸಲಹೆಯ ಪ್ರಕಾರ ನಾವು ಆತನೊಂದಿಗೆ ಇರದೆ, ಸರಳವಾಗಿ ಆತನನ್ನು ಹಿಂಬಾಲಿಸಬೇಕಷ್ಟೆ.

ನಾವು ಕೇವಲ ಆತನ ಬಗ್ಗೆ ಅರಿಯದೆ, ಸ್ವತಃ ಯೇಸುವನ್ನೇ ಅರಿಯಬಹುದೆಂದು ಹೊಸ ಒಡಂಬಡಿಕೆ ಸೂಚನೆ ನೀಡುತ್ತದೆ. ಆತನ ಸಂದೇಶ, ಮರಣ ಪುನರುತ್ಥಾನದ ಮೂಲಕ ನಾವು ಆತನನ್ನು ಅರಿಯುತ್ತೇವೆ. ಮಾನಸಾಂತರ ಹಾಗೂ ದೀಕ್ಷಾಸ್ನಾನದ ಮೂಲಕ ನಾವು ಆತನನ್ನು ಅರಿಯಬೇಕು. ನಮ್ಮೊಂದಿಗಿರುವ ಆತನ ಆತ್ಮನ ಮೂಲಕ, ಆತನ ಉಪದೇಶದ ಪ್ರಕಾರ ನಾವು ಆತನನ್ನು ಅರಿಯುತ್ತೇವೆ. ನಾವು ಆತನೊಂದಿಗೆ ನಿತ್ಯವಾಗಿ ಜೀವಿಸುತ್ತೇವೆ.

ಎಚ್ಚರಿಕೆಯ ಒಂದು ಮಾತು ಮೊದಲನೆ ಶತಮಾನದಲ್ಲಿ ಆತನನ್ನು ಅರಿತವರು ಬದಲಾವಣೆಗೊಂಡಿದ್ದರು. ನಾವುಗಳು ಸಹ ಬದಲಾಗಬಹುದು ಎಂದು ನಂಬಬೇಕು. ಆತನನ್ನು ಅರಿಯುವದರಿಂದ ನಾವು ಬದಲಾಗುತ್ತೇವೆ.

ಆತನನ್ನು ಅರಿಯಲು ಸಿದ್ಧವಿರುವೆಯಾ?